B. ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ಹಕ್ಕುಗಳನ್ನು ಅಂಗೀಕರಿಸಿ ಇದೆ :—

ಹೆಸರು.	ಸ್ಥಳ.	ಪ್ರವೇಶ.
ನರಸಿಂಹಸ್ವಾಮಿಯ ದೇವಸ್ಥಾನ.	ಗುಡ್ಡದಮೇಲಿನ ಸರ್ವೆ 1ನೆ ನಂಬರಿನಲ್ಲಿ.	(iii) ಪರ್ವವೆಲ್ಲಾ ಜನಗಳ ಮತ್ತು ದನಗಳ ಸಂಚಾರಕ್ಕೆ ಬಿಡಲ್ಪಟ್ಟ ನಾಲ್ಕು ಅಡಿಗಳ ಅಗಲವಿರುವ ಒಂದು ಕಾಲು ದಾರಿಯಿಂದ ಈ ದಾರಿಯು ಬಿಲಕೆರೆ ಗ್ರಾಮದ ಸರ್ವೆ 44ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ ಸುಮಾರು 25 ಸರಪಣಿಗಳ ದೂರ ದಕ್ಷಿಣಕ್ಕೆ ಹೋಗಿ ದೇವಸ್ಥಾನಕ್ಕೆ ಸೇರುತ್ತದೆ.

II. ಈ ಕೆಳಗೆ ನಮೂದಿಸಲ್ಪಟ್ಟವುಗಳು ಆವರಣಗಳು ಎಂದು ಭಾವಿಸಲ್ಪಟ್ಟಿವೆ :—

(i) ನರಸಿಂಹಸ್ವಾಮಿಯ ದೇವಸ್ಥಾನ ಮತ್ತು ಅದರ ಮಂಟಪ, ಮತ್ತು ಅದರ ಸುತ್ತಲೂ ಅರ್ಧ ಎಕರೆ ವಿಸ್ತೀರ್ಣವುಳ್ಳ ಇಳಿದುಕೊಳ್ಳುವ ಸ್ಥಳವೂ ಸೇರಿ.

(ii) ಹನುಮಂತರಾಯನ ದೇವಸ್ಥಾನ, ಮತ್ತು ಅದರ ಸುತ್ತಲೂ ಅರ್ಧ ಎಕರೆ ವಿಸ್ತೀರ್ಣದ ಇಳಿದುಕೊಳ್ಳುವ ಸ್ಥಳವೂ ಸೇರಿ.

(iii) ಮರ್ಚನಹಳ್ಳಿ ಗ್ರಾಮದ ಸರ್ವೆ 83 ಮತ್ತು 84ನೆ ನಂಬರು ಜಮೀನುಗಳು. ಇವುಗಳಿಗೆ ಪ್ರವೇಶವು I (i)ನೆ ನಂಬರಿನ ದಾರಿ ಗುರ್ತಿನಲ್ಲಿ ತೋರಿಸಿ ಇದೆ.

III. ಈ ಕೆಳಗೆ ನಮೂದಿಸುವ ರಿಯಾಯಿತಿಗಳು ಅಂಗೀಕರಿಸಲ್ಪಟ್ಟಿವೆ :—

(i) ತರುವಾತಿ ವಿಂಗಡಿಸದೆ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಒಣಗಿ ಬಿದ್ದುಹೋಗಿ ಉಪಯೋಗಕ್ಕೆ ಬಾರದೆ ಇರುವ ಮರಗಳನ್ನು ಕಟ್ಟಿಗೆಗೋಸ್ಕರ ತಿಂಗಳು ಬಂಚಕ್ಕೆ ಬಂದು ಕುಟುಂಬಕ್ಕೆ 5 ತಲೆಹೊರೆಯಂತೆ ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳು ವರೆಗೆ ಸಂಸ್ಥಾನ ಜಂಗಲಿಯಲ್ಲಿ ಜಂಗಲಿ ಅಧಿಕಾರಿಗಳು ತೋರಿಸುವ ಪ್ರದೇಶಗಳಿಂದ ಮುಫತ್ತಾಗಿ ತೆಗದುಕೊಂಡು ಹೋಗುವುದು.

(ii) ಕೇಕದಾರನಿಂದ ಸರ್ಟಿಫೈ ಮಾಡಲ್ಪಟ್ಟ ಮೇರೆಗೆ ಪ್ರತಿ ವರ್ಷವೂ ಮುಫತ್ತಾಗಿ ಮನೆಯ ಅಂಕಣ ಬಂದಕ್ಕೆ 5 ತಲೆಹೊರೆಯು ಮೇರೆಗೆ ಮನೆ ಹೊದಿಸುವ ಹುಲ್ಲು.

(iii) ದೇವಸ್ಥಾನದಲ್ಲಿ ಅಡಿಗೆ ಮಾಡುವುದಕ್ಕೋಸ್ಕರ, ತಾಲ್ಲೂಕು ಅಮಲ್ದಾರರು ಸರ್ಟಿಫೈ ಮಾಡುವಷ್ಟು (1ನೆ ನಂಬರ್ ರಿಯಾಯಿತಿಯಲ್ಲಿ ತೋರಿಸಿದ ಜಾತಿಯ ಮರದ) ಸಾದೆಯನ್ನು ಶ್ರಾವಣ ಮಾಸದಲ್ಲಿ ಭಕ್ತಾದಿಗಳಿಗೆ ಮುಫತ್ತಾಗಿ ಕೊಡಬೇಕು.

(iv) ಕುರಿ ಮತ್ತು ಮೇಕೆಗಳು ಹೊರತು ಬಾಕಿ ದನಗಳನ್ನು ಮಾಮೂಲು ದರದಲ್ಲಿ ಅರ್ಧ ಚಾರ್ಜ್ ಕೊಟ್ಟು ಮೇಯಿಸುವುದು. ಇದು ಈ ಕೆಳಗೆ ಹೇಳುವ ಗ್ರಾಮಗಳ ದನಗಳಿಗೆ ವರ್ಷವೆಲ್ಲಾ ಲಗಾವಾಗುತ್ತದೆ :—

		ಕುರಿ ಮೇಕೆ ವಿನಾ ಬಾಕಿ ದನಗಳು.
1.	ಬಿಲಕೆರೆ	229
2.	ಗೋವಿಂದಹಳ್ಳಿ	64
3.	ಕುರಣಗೆರೆ	220
4.	ಕುಕ್ಕೂರು	173

(i) ಮತ್ತು (ii)ನೆ ರಿಯಾಯಿತಿಗಳು ಬಿಲಕೆರೆ, ಗೋವಿಂದಹಳ್ಳಿ, ಕುರಣಗೆರೆ, ಕುಕ್ಕೂರು ಮತ್ತು ಮರ್ಚನಹಳ್ಳಿ ಗ್ರಾಮಗಳ ರೈತರಿಗೆ ಲಗಾವಾಗುತ್ತದೆ.

ತಾರೀಖು 19ನೆ ಡಿಸೆಂಬರ್ 1906.

ನಂ. 6156 ಫಾ. 116--06—3, 1900ನೆಯ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್‌ನಾಮೆಗೆ ಲಗತ್ತಾಗಿರುವ ಷಡ್ಯೂಲಿನಲ್ಲಿ ನಮೂದಿರುವ ಚಕ್ಕುಬಂದಿಯುಳ್ಳ ವಿಸ್ತೀರ್ಣವು 1907ನೆಯ ಇಸವಿಯ ಜನವರಿ ಗುರ್ತಿ ಲಾಗಾಯಿತು ಸ್ಟೇಟ್ ಫಾರೆಸ್ಟ್ ಯಾ ಸಂಸ್ಥಾನ ಜಂಗಲಿಯಾಗಿ ಏರ್ಪಡಿಸಲ್ಪಡುವುದೆಂದು ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿಯ ಹೆಸರು	ಸರ್ವೆ ನಂಬರುಗಳು	ಚಕ್ಕುಬಂದಿ
ತುಮಕೂರು	ಚಿಕ್ಕನಾಯಕನಹಳ್ಳಿ	ಕಾದರವಳ್ಳಿ ಜಂಗಲಿನ ಬಡಾನಹಳ್ಳಿ	ಸರ್ವೆ 1389, ಗುಂಟೆ 9	ಉತ್ತರಕ್ಕೆ :—ಚಿಕ್ಕದುರ್ಗ ಡಿಸ್ಟ್ರಿಕ್ಟಿನ ತಿರುಮನಾಲ್, ಮತ್ತು ತುಮಕೂರು ಡಿಸ್ಟ್ರಿಕ್ಟಿನ ವೇಲನಹಳ್ಳಿ ಮತ್ತು ಕೆಂಕೆರೆ ಗ್ರಾಮಗಳ ಮುಕ್ಕುಪ್ಪೆ ಎಲ್ಲೆಯ ಬಾಂದುಗಳಿಂದ ಹೊರಟು, ಎಲ್ಲೆಯ ರೇಖೆಯು ಪೂರ್ವಕ್ಕೆ ಸದರಿ ತಿರುಮನಾಲ್ ಗ್ರಾಮದ ಎಲ್ಲೆಯಲ್ಲಿ ವೇಲನಹಳ್ಳಿ ಗ್ರಾಮದ ಸರ್ವೆ 22ನೆ ನಂಬರಿನ ವಾಯವ್ಯ ಮೂಲೆಯವರೆಗೆ ಹೋಗುತ್ತದೆ. ಪೂರ್ವಕ್ಕೆ :—ಅಲ್ಲಿಂದ ವೇಲನಹಳ್ಳಿ ಗ್ರಾಮದ ಸರ್ವೆ 22 ಮತ್ತು 21ನೆ ನಂಬರುಗಳ ಮತ್ತು ಗುರುವಾಪುರದ ಗ್ರಾಮದ ಸರ್ವೆ 14, 15, 16, 10, 11, 12ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಸೊಟ್ಟುಸೊಟ್ಟಾಗಿ ದಕ್ಷಿಣ, ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳಿಗೆ ಕೊನೆಯಲ್ಲಿ ಹೇಳಿದ ಸರ್ವೆ ನಂಬರಿನ ವಾಯವ್ಯಮೂಲೆಯ ವರೆಗೂ ಹೋಗುತ್ತದೆ.

ದಕ್ಷಿಣಕ್ಕೆ :—ಅಲ್ಲಿಂದ ಎಲ್ಲೆಯ ರೇಖೆ, ವಾಯವ್ಯಕ್ಕಾಗಿ ಸೋಮನಹಳ್ಳಿ ಗ್ರಾಮದ ಸರ್ವೆ 43ನೆ ನಂಬರಿನ ಉತ್ತರ ಎಲ್ಲೆಯ, ನ್ನು ಅನುಸರಿಸಿ ಸದರಿ ನಂಬರಿನ ವಾಯವ್ಯ ಮೂಲೆಯವರೆಗೂ ಹೋಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಸದರಿ ಸರ್ವೆ ನಂಬರಿನ ಪಶ್ಚಿಮದ ಎಲ್ಲೆಯನ್ನು ಅನುಸರಿಸಿ ಅದೇ ನಂಬರಿನ ನೈರುತ್ಯ ಮೂಲೆಯವರೆಗೂ ಹೋಗಿ, ಅಲ್ಲಿಂದ ವಾಯವ್ಯಕ್ಕಾಗಿ ಕಂಪನಹಳ್ಳಿ ಗ್ರಾಮದ ಸರ್ವೆ 16ನೆ ನಂಬರಿನಲ್ಲಿ ನುಗ್ಗಿ ಸದರಿ ಕಂಪನಹಳ್ಳಿ ಮತ್ತು ಕುರಿಹಟ್ಟಿ ಗ್ರಾಮಗಳ ಎಲ್ಲೆಯಲ್ಲಿ ಬಂದು ಸ್ಥಳಕ್ಕೆ ಅಂದರೆ ಸದರಿ ಕಂಪನಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನ ವಾಯವ್ಯ ಮೂಲೆಗೆ ಪೂರ್ವಕ್ಕೆ ಸುಮಾರು 5 ಫರ್ಲಾಂಗುಗಳ ದೂರದಲ್ಲಿ ಸೇರುತ್ತದೆ.

ಪಶ್ಚಿಮಕ್ಕೆ :—ಆ ಸ್ಥಳದಿಂದ ವಾಯವ್ಯಕ್ಕೆ ಕುರಿಹಟ್ಟಿ ಗ್ರಾಮದ ಸರ್ವೆ 43ನೆ ನಂಬರಿನಲ್ಲಿ ನುಗ್ಗಿ ಸದರಿ ಗ್ರಾಮದ ಸರ್ವೆ 43ನೆ ನಂಬರಿನ ಈಶಾನ್ಯ ಮೂಲೆಯವರೆಗೂ ಹೋಗುತ್ತದೆ. ಅಲ್ಲಿಂದ ಈಶಾನ್ಯಕ್ಕೆ ಕೆಂಕೆರೆ ಗ್ರಾಮದ ಸರ್ವೆ 238ನೆ ನಂಬರಿನ ದಕ್ಷಿಣ ಎಲ್ಲೆಯನ್ನು ಅನುಸರಿಸಿ ಕೊನೆಯಲ್ಲಿ ಹೇಳಿದ ಸ್ಥಳದಿಂದ ಸುಮಾರು 2 ಫರ್ಲಾಂಗುಗಳ ದೂರ ಹೋಗುತ್ತದೆ. ಅಲ್ಲಿಂದ ಉತ್ತರಕ್ಕೂ ವಾಯವ್ಯಕ್ಕೂ ಸದರಿ ಕೆಂಕೆರೆ ಗ್ರಾಮದ ಸರ್ವೆ 238 ಮತ್ತು 237ನೆ ನಂಬರುಗಳಲ್ಲಿ ನುಗ್ಗಿ ಅದೇ ಗ್ರಾಮದ ಸರ್ವೆ 236ನೆ ನಂಬರಿನ ದಕ್ಷಿಣ ಎಲ್ಲೆಯ ಮಧ್ಯಕ್ಕೆ ಹೋಗಿ, ಅಲ್ಲಿಂದ ಈಶಾನ್ಯಕ್ಕೆ ಸದರಿ 236ನೆ ಸರ್ವೆ ನಂಬರಿನ ದಕ್ಷಿಣ ಎಲ್ಲೆಯನ್ನು ಅನುಸರಿಸಿ ಪೂರಟ ಸ್ಥಳವನ್ನು ಸೇರುತ್ತದೆ.

ಷರಾಗಳು :—

ಈ ಕೆಳಗೆ ನಮೂದು ಇರುವ ದಾರಿಯ ಹಕ್ಕುಗಳು ಅಂಗೀಕರಿಸಲ್ಪಟ್ಟಿವೆ :—

(1) ಮೇಲನಹಳ್ಳಿಯಿಂದ ಹುಳಿಯಾರಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ಜನಗಳ ಸಂಚಾರಕ್ಕೆ ಮಾತ್ರ. ಇದು ಗುರುವಾಪುರ ಗ್ರಾಮದ ಸರ್ವೆ 13ನೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ನೈರುತ್ಯದಿಕ್ಕಿಗೆ ಹೋಗಿ ಕುರಿಹಟ್ಟಿ ಗ್ರಾಮದ ಸರ್ವೆ 43ನೆ ನಂಬರಿನಲ್ಲಿ ಜಂಗಲನ್ನು ಬಿಡುತ್ತದೆ.

(2) ಕೆಂಕೆರೆಯಿಂದ ಸರ್ವೆ 238ನೆ ನಂಬರಿನಲ್ಲಿರುವ ಕಲ್ಲೂರಪ್ಪನಗುಡಿಗೆ ಹೋಗುವ ಕಾಲುದಾರಿ, 6 ಅಡಿ ಅಗಲ, ಜನಗಳ ಸಂಚಾರಕ್ಕೆ ಮಾತ್ರ. ಇದು ಸದರಿ ಸರ್ವೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ಪೂರ್ವಕ್ಕೆ ಸದರಿ ದೇವಸ್ಥಾನಕ್ಕೆ ಹೋಗುತ್ತದೆ.

(3) ಕೆಂಕೆರೆಯಿಂದ ಚೆನ್ನಬಸವೇಶ್ವರ ಗವಿಗೆ ಸರ್ವೆ 237ನೆ ನಂಬರಿನಲ್ಲಿ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ಜನಗಳ ಸಂಚಾರಕ್ಕೆ ಮಾತ್ರ. ಇದು ಸರ್ವೆ 237ನೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ಪೂರ್ವಕ್ಕೆ ದೇವಸ್ಥಾನಕ್ಕೆ ಹೋಗುತ್ತದೆ.

(4) ಮೇಲನಹಳ್ಳಿಯಿಂದ ಚೆನ್ನಬಸವೇಶ್ವರನ ಗವಿಗೆ ಹೋಗುವ ಕಾಲುದಾರಿ, 9 ಅಡಿಗಳ ಅಗಲ, ಜನರ ಸಂಚಾರಕ್ಕೆ ಮಾತ್ರ. ಇದು ಮೇಲನಹಳ್ಳಿ ಗ್ರಾಮದ ಸರ್ವೆ 20ನೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ವಾಯವ್ಯದಿಕ್ಕಿಗೆ ಸದರಿ ಗುಡಿಗೆ ಹೋಗುತ್ತದೆ.

ತಾರೀಖು 20ನೆ ಡಿಸೆಂಬರ್ 1906.

ನಂ. ಆರ್. 6180—ಫಾ. 15-06—9, ಸ್ 1900ನೆ ವರ್ಷದ 11ನೆ ನಂಬರಿನ ಮೈಸೂರು ಜಂಗಲಿ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್ನಾಮೆಗೆ ಲಗತ್ತಿಸಿರುವ ಪೆಜಿಷ್ಯೂಲಿನಲ್ಲಿ ತೋರಿಸಿಲ್ಪಟ್ಟ ಜಕ್ಕು ಬಂದಿಯುಳ್ಳ ಪ್ರದೇಶವು, ಸದರಿ ಇಸ್ತಿಹಾರ್ನಾಮೆಯ ಕೆಳಗೆ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, 1907ನೆ ಇಸವಿಯ ಜನವರಿ ಗುರ್ರೆ ಲಾಗಾಯಿತು, "ಸಂಸ್ಥಾನದ ಜಂಗಲಿ" ಎಂದು ಏಣಿ ಸಲ್ಪಡುವುದೆಂದು ಪ್ರಕಟಿಸಲು ಹುಕ್ಕುಂ ದಯಪಾಲಿಸಿರುತ್ತಾರೆ :—

ಜಿಲ್ಲೆಯ ಹೆಸರು.	ತಾಲ್ಲೂಕುಗಳು.	ಸುಮಾರು ವಿಸ್ತೀರ್ಣ.	ಜಂಗಲಿನ ಹೆಸರು.	ಚತುರ್ಗಡಿಗಳು.
ಮೈಸೂರು.	ನಂಜನಗೂಡು ಮತ್ತು ಹಗ್ಗದವನಕೋಟೆ.	14.27 ಚದರ ಮೈಲಿಗಳು.	ನಾಗನಪುರ ಜಕ್ಕು II.	ಉತ್ತರಕ್ಕೆ :—ಮೇರೆಯ ರೇಖೆಯು ಹೆಡಿಯಾಲ ಗ್ರಾಮದ ಸರ್ವೆ 35, 36 ಮತ್ತು 125ನೆ ನಂಬರುಗಳ ಮುಕ್ಕುಪ್ಪೆ ಬಾಂದುಗಳಿಂದ ಹೊರಟು ಮಾಧವನಹಳ್ಳಿಗೂ ಮತ್ತು ಹೆಡಿಯಾಲ ಗ್ರಾಮಕ್ಕೂ ನಡುವೆ ಇರುವ ಮೇರೆಯ ರೇಖೆಯು ಕೂಡ ಆಗ್ನೇಯಕ್ಕೆ ಹೆಡಿಯಾಲ, ಮಾಧವನಹಳ್ಳಿ ಮತ್ತು ಅಮಕಹಳ್ಳಿ ಗ್ರಾಮಗಳ ಮುಕ್ಕುಪ್ಪೆ ಬಾಂದುಗಳಿಗೆ ಹೋಗುತ್ತದೆ ; ಅಲ್ಲಿಂದ ದಕ್ಷಿಣಕ್ಕೆ ಹೊರಟು ನಾಗಣಾಪುರದ ಸರ್ವೆ 52 ಮತ್ತು 123ನೆ ನಂಬರುಗಳಲ್ಲಿ ನುಗ್ಗಿ ಸುಮಾರು 68 ಸರಪಣಿಗಳು ದೂರ ಹೋಗಿ ಅಲ್ಲಿ ಹಾದನೂರು-ವಡೇರಪುರದ ಗಾಡಿ ದಾರಿಯನ್ನು ದಾಟಿ ಆಗ್ನೇಯಕ್ಕೆ ನಾಗಣಾಪುರದ ಸರ್ವೆ 123 ಮತ್ತು 129ನೆ ನಂಬರುಗಳಲ್ಲಿ ನುಗ್ಗಿ ಸುಮಾರು 108 ಸರಪಣಿಗಳು ದೂರ ಹೋಗಿ ಸರ್ವೆ 191ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ ; ಅಲ್ಲಿಂದ ಸರ್ವೆ 89ನೆ ನಂಬರಿನ ಮುಖಾಂತರ ಸುಮಾರು 25 ಸರಪಣಿಗಳು ದೂರ ಹೋಗಿ ಅಲ್ಲಿಂದ ಪೂರ್ವಕ್ಕೆ ಅದೇ ಸರ್ವೆ ನಂಬರಿನಲ್ಲಿ ಸು